colleague is concerned, and I am sure that this will come through in the recent amendment of the Rent Control Act.

ಅನುಮೋದನೆಯಿಲ್ಲದೆ ಶಾಲೆಗೆ ವೇತನ ಅನುದಾನ ಬಿಡುಗಡೆ ಮಾಡುವ ಬಗ್ಗೆ

1801. ಶ್ರೀ ಕುಮರುಲ್ ಇಸ್ಲಾಮ್. (ಗುಲ್ಬರ್ಗ). ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ). ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) . ಶ್ರೀ ಬೈರೇಗೌಡ (ವೇಮಗಲ್) : ಮಾನ್ಯ ಶಿಕ್ಷಣ ಸಂಸದೀಯ ವ್ಯವಹಾರ ಸಂಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗದ ಗಾಜಿಪುರದಲ್ಲಿರುವ ಶಿಶುಶಿಕ್ಷಣ ಪ್ರಾಥಮಿಕ ಶಾಲೆಗಳು ಅನುದಾನ ರಹಿತ ಶಾಲೆಗಳೆಂಬುದು ಸರ್ಕಾರಕ್ಕೆ ತಿಳಿದಿದೆಯೇ :

ಆ) ಹಾಗಿದ್ದಲ್ಲಿ, ಸರ್ಕಾರದ ಅನುಮತಿ ಇಲ್ಲದೆ ಈ ಶಾಲೆಗೆ ವೇತನಾನುದಾನವನ್ನು ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ, ಇದುವರೆಗೆ ಈ ಶಾಲೆಗೆ ನೀಡಿದ ಮೊತ್ತ :

ಈ) ಗುಲ್ಬರ್ಗ ಜಿಲ್ಲಾ ಪರಿಷತ್ತಿನ ಉಪಕಾರ್ಯದರ್ಶಿ ಮತ್ತು ಗುಲ್ಬರ್ಗ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಮೇಲಿನ ಅಕ್ರಮ ಪಾವತಿ ಸರ್ಕಾರದ ಗಮನಕ್ಕೆ ಬಂದಿರುವುದು ನಿಜವೇ ?

ಉ) ಹಾಗಿದ್ದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮವೇನಾದರೂ ತೆಗದುಕೊಳ್ಳಲಾಗಿದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಗಾಜಿಪುರದ ಶಿಶುನಿಕೇತನ ಕನ್ನಡ ಪ್ರಾಥಮಿಕ ಶಾಲೆ ಅನುದಾನಿತ ಶಾಲೆಯಾಗಿದೆ. ಆದರೆ ಮರಾಠ ಮಾಧ್ಯಮದ ಶಾಲೆ ಅನುದಾನಿತ ಶಾಲೆಯಾಗಿಲ್ಲ.

ಆ) ಹೌದು.

ಇ) ರೂ. 53.762-51.

ಈ) ಹೌದು. ಎರಡೂ ಮಾಧ್ಯಮದ ಶಾಲೆಗಳು ಒಂದೇ ಎಂದು ಪರಿಗಣಿಸಿ ಮರಾಠಿ ಮಾಧ್ಯಮದ ಶಾಲಾ ಸಿಬ್ಬಂದಿಗೆ ವೇತನ ಬಿಡುಗಡೆ ಮಾಡಲಾಗಿದೆ.

SRI QUMARUL ISLAM : Sir, this is a very important question I have raised. A very serious offence has been committed by some of the officers. There is one school in my constituency -Shivashiniketan Primary School. That school is not approved and it does not come under the grant-in-aid. Then I put the question whether this school has been given grants and the teachers have received their salary, the reply given is 'Yes'. They are getting the salary from the last eight years. i.e.

Rs. 53,782 so far. They are getting the salary right from the establishment. i.e. from 1980 onwards. That school doesn't come under grant-in-aid and it is not approved, but still the teachers are getting their salary and this fact has been accepted. When I put a further question whether it has been brought to the notice of the Government by the DDPI, Gulbarga and the Deputy Secretary, Zilla Parishad and what action has been taken, the reply given was, both Marathi medium and Kannada medium are running in the same school, and because of this confusion, salary has been paid. Regarding action taken, they have replied that no action has been taken. If such a grave offence has been committed, I would expect that the government will immediately suspend those officers. The money involved here is Rs. 53,000/- and it has been going on for the last eight years. So, I demand through the Chair, that such officers who are involved in this should be immediately suspended and enquiry is to be conducted.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ. 'ಶಿಶುನಿಕೇತನ' ಕನ್ನಡ ಮಾಡಿಯಂ ಪ್ರಾಥಮಿಕ ಶಾಲೆ ಏನು ಇದೆ. ಅದರ ಜೊತೆ ಮರಾಠಿ ಮಾಡಿಯಂ ಶಾಲೆಯನ್ನು ಕೂಡಾ ಸೇರಿಸಿದೆ. ಮರಾಠಿ ಮಾಡಿಯಂ ಶಾಲೆ ನಿಜವಾಗಿಯೂ ಅದು ಅನುದಾನಕ್ಕೆ ಒಳಪಟ್ಟಿರಲಿಲ್ಲ., ಆದರೆ ಅಲ್ಲಿ ಪೇಮೆಂಟ್ ಆಗಿದೆ. ಅನುದಾನಕ್ಕೆ ಒಳಪಡದಿದ್ದರೂ ಅವರಿಗೆ ಅಲ್ಲಿ ಸಂಬಳವನ್ನು ಕೊಟ್ಟಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಕೂಡಲೇ ಆ ಸಂಬಳ ಬಿಡುಗಡೆ ಮಾಡುವಂಥದ್ದನ್ನು ಈಗ ನಿಲ್ಲಿಸಿದ್ದೇವೆ. ಈಗಾಗಲೇ 53.762-51 ರೂಪಾಯಿಗಳನ್ನು ಅದನ್ನು ಕೊಟ್ಟಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಇದರಲ್ಲಿ ತಪ್ಪಾಗಿದೆ. ಅದಕ್ಕೆ ಯಾವ ಅಧಿಕಾರಿಗಳು ಕಾರಣಕರ್ತರು? ಎಂಬ ಬಗ್ಗೆ ತನಿಖೆ ಮಾಡಬೇಕೆಂದು ನಮ್ಮ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರಿಗೆ ಹೇಳಿದ್ದೇನೆ. ಎರಡು ವಾರದ ಒಳಗೆ ವರದಿಯನ್ನು ತರಿಸಿ ಯಾರು ತಪ್ಪಿತಸ್ಥರು ಇದ್ದರೂ ಕೂಡಾ ಅವರ ಮೇಲೆ ಕಠಿಣವಾದಂಥ ಕಾರ್ಯಕ್ರಮವನ್ನು ಕೈಗೊಳ್ಳುತ್ತೇನೆ.

ಕಪ್ಪು ಹಲಗೆ ಯೋಜನೆ ಅಡಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಿರ್ಮಾಣಗೊಂಡಿರುವ ಕೊಠಡಿಗಳ ಬಗ್ಗೆ.

1803. ಶ್ರೀ ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಪ್ಪುಹಲಗೆ ಕಾರ್ಯಾಚರಣೆ ಯೋಜನೆ ಅನ್ವಯ ಇಲ್ಲಿಯವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಿರ್ಮಾಣಗೊಂಡಿರುವ ಕೊಠಡಿಗಳೆಷ್ಟು ?